

ಚಿತ್ರ: ಸವಿತಾ ಬಿ. ಆರ್

'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ.' ಎರಡು ಮಹಾಕಾವ್ಯದಷ್ಟೇ ಗಾಢ ಅನುಭೂತಿಯುಳ್ಳ ಕಾದಂಬರಿಗಳನ್ನು ರಚಿಸಿದ ಕುವೆಂಪು ಅವರಿಗೆ ಯಾಕಾಗಿ 'ಶ್ರೀರಾಮಾಯಣ ದರ್ಶನಂ' ರಚಿಸಬೇಕೆನಿಸಿತು? ಇತ್ತೀಚೆಗೆ ನನಗನ್ನಿಸುವುದು 'ಭಾರತೀಯತೆ' ಎನ್ನುವುದನ್ನು ಕುವೆಂಪು ಈ ಕೃತಿಯ ಮೂಲಕ ಶೋಧಿಸಲು ಹೊರಟರೇನೋ ಎಂದು. 'ರಾಮ'ನ 'ಭಾರತೀಯ' ಎನ್ನುವ ಭಿತ್ತಿಯನ್ನು ಸೃಷ್ಟಿಸುವುದರಲ್ಲಿ ವಹಿಸಿದ ಪಾತ್ರದ ಬಗ್ಗೆ ವಿವರಿಸುವ ಅಗತ್ಯವಿಲ್ಲ. ಆದರೆ ಆ 'ರಾಮ'ನನ್ನು ಸಂಗತಗೊಳಿಸಿಕೊಳ್ಳುವುದು ಹೇಗೆ? ಪುರುಷೋತ್ತಮನಾದ ರಾಮನಿಂದ ಹಿಡಿದು, ಗಾಂಧಿಯವರ 'ಹೇ ರಾಮ್' ತನಕ ರಾಮ ಒಬ್ಬ ವ್ಯಕ್ತಿಯಾಗಿ ಮಾತ್ರವಲ್ಲ, ಒಂದು ರೂಪಕವಾಗಿ, ನೈತಿಕ ಅಳತೆಗೋಲಾಗಿ, ಸಿದ್ಧಿಯ ಶಿಖರವಾಗಿ, ಅಂತಃಕರಣದ ಗಣಿಯಾಗಿ... ಹೀಗೆ ಅವನು ಅಮರ.

ರಾಮನನ್ನು, ಅವನ ಸುತ್ತ ಹೆಣೆದ ಕಥನವನ್ನು ಕುವೆಂಪು ಅದರ ಪ್ರಭಾವಳಿಯಿಂದ ನಿಧಾನವಾಗಿ ಬಿಡಿಸುತ್ತಾ ಅವನನ್ನು ಮಾನವೀಕರಣಗೊಳಿಸುತ್ತಾ ಹೋಗುತ್ತಾರೆ. ಭಾರತೀಯರ ಪವಿತ್ರ ಗ್ರಂಥವನ್ನು ಕುವೆಂಪು ಮಾನವೀಯತೆಯ ಅಮೃತವನ್ನುಣಿಸಿ ಸಮಕಾಲೀನಗೊಳಿಸುತ್ತಾರೆ. ರಾಮನನ್ನು 'ಸಾಮಾನ್ಯ'ಗೊಳಿಸುತ್ತಲೇ, 'ಮನುಷ್ಯೀಕರಣ'ಕ್ಕೆ ಒಳಗು ಮಾಡುತ್ತಲೇ ಕುವೆಂಪು ಅಜರಾಮರಗೊಳಿಸುತ್ತಾರೆ. ದೇವರಾಗುವುದಲ್ಲ, ಮನುಷ್ಯರಾಗಿ ಉಳಿಯುವುದು ಎಷ್ಟು ಸವಾಲಿನದ್ದು – ಅದನ್ನು ರಾಮನಂಥ ಧೀರರು ಮಾತ್ರ ಎದುರಿಸಬಲ್ಲರು ಎನ್ನುವ ಸತ್ಯವನ್ನು ಕುವೆಂಪು ಘನವಾಗಿ ಕಟ್ಟಿಕೊಡುತ್ತಾರೆ. ಕಾವ್ಯದುದ್ದಕ್ಕೂ ಕುವೆಂಪು ಒಳಿತು ಮತ್ತು ಕೆಡುಕುಗಳ ಸಂಘರ್ಷವನ್ನು ಕಾಣಿಸುತ್ತಾ ರಾಮಾಯಣದ ಪಾತ್ರಗಳಲ್ಲಿ ನಾವು ಮಾಡಿಕೊಂಡಿದ್ದ ನಾಯಕ–ನಾಯಕಿ, ಖಳನಾಯಕ/ಕಿಯ ಪರಿಕಲ್ಪನೆಗಳನ್ನೇ ಬದಲಿಸಿಬಿಡುತ್ತಾರೆ.

ರಾಮ ಮತ್ತು ಭಕ್ತಿ ಎರಡೂ ಭಯೋತ್ಪಾದಕ ಸಂಗತಿಗಳಾಗಿರುವ ನಮ್ಮ ಈ ಕಾಲದಲ್ಲಿ 'ರಾಮಾಯಣ ದರ್ಶನಂ' ಬೇಕಿರುವುದು, ಯಾವ ರಾಮ ಬೇಡ ಎನ್ನುವುದರ ಸ್ಪಷ್ಟತೆಗಾಗಿ. ಮೂಲಭೂತವಾದದ ವಿಕಾರಕ್ಕೆ ಬಂಡವಾಳವಾಗಿಯೂ ಬಲಿಪಶುವಾಗಿಯೂ ಬಳಕೆಯಾಗುತ್ತಿರುವ ರಾಮನ ಬದಲಿಗೆ, ಅಪ್ಪಟ ಮನುಷ್ಯನಾಗಲು ಉದ್ದಕ್ಕೂ ಹೆಣಗಿದ ರಾಮ ನಮ್ಮೆಲ್ಲರ ರಾಮ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಾಗಿ 'ರಂಗಾಯಣ' ಸಿದ್ಧಪಡಿಸಿ ಪ್ರಸ್ತುತಪಡಿಸಿದ 'ಶ್ರೀರಾಮಾಯಣ ದರ್ಶನಂ' ರಂಗಪ್ರದರ್ಶನ ನಮ್ಮ ಗಮನ ಸೆಳೆಯುವುದು ಕುವೆಂಪು ಅವರ ಮೂಲ ನಿಲುವುಗಳು ಅದೆಷ್ಟು ಪ್ರಖರವಾಗಿವೆ ಮತ್ತು ಅವುಗಳಿಗಿರುವ ಮುನ್ನೋಟದ ಶಕ್ತಿಯ ಕಾರಣಕ್ಕಾಗಿ. ಈ ಕೃತಿಯನ್ನು ರಂಗಕ್ಕೆ ತರುವುದು ಬಹುದೊಡ್ಡ ಸವಾಲು. (ರಂಗಾಯಣದ ಹಿರಿಯ ಕಲಾವಿದರಾದ ಜಗದೀಶ ಮನವಾರ್ತೆ ಮತ್ತು ಕೃಷ್ಣಕುಮಾರ್ ನಾರ್ಣಕಜೆ 'ರಾಮಾಯಣ ದರ್ಶನಂ' ಕಾವ್ಯವನ್ನು ರಂಗರೂಪಕ್ಕೆ ತಂದಿದ್ದಾರೆ. ನಿರ್ದೇಶನ ಕೆ.ಜಿ. ಮಹಾಬಲೇಶ್ವರ ಅವರದು) ಕಾದಂಬರಿಯ ವಿಷಯಕ್ಕೆ ಕುವೆಂಪು ಹೇಳಿದ 'ಕರತಲ ರಂಗಭೂಮಿ' ಎನ್ನುವ ಮಾತು ಪ್ರಸಿದ್ಧವಾಗಿದೆ. ಆದರೆ, ಕುವೆಂಪು ಅವರ ಕಾದಂಬರಿಗಳನ್ನಾಗಲೀ 'ರಾಮಾಯಣ ದರ್ಶನಂ' ಕಾವ್ಯವನ್ನಾಗಲೀ ರಂಗಭೂಮಿಗೆ ತರುವಾಗ ಅನೇಕ ಸವಾಲುಗಳು ಎದುರಾಗುತ್ತವೆ.

ಈ ರಂಗಪ್ರಸ್ತುತಿಯ ನಿರ್ದೇಶಕರು ಈ ಸವಾಲನ್ನು ದಿಟ್ಟವಾಗಿ ಎದುರಾಗಿದ್ದಾರೆ. ಕುವೆಂಪು ಅವರ ಮೂಲ ಆಶಯವನ್ನು ಸ್ಪಷ್ಟವಾಗಿ ಗ್ರಹಿಸಿದ್ದರಿಂದಲೇ ಅವರಿಗೆ ಇದರಲ್ಲಿ ಭಾಗಗಳನ್ನು ಆಯ್ದು ಪೋಣಿಸುವುದು ದೊಡ್ಡ ಸಮಸ್ಯೆಯಾಗಿಲ್ಲ. 'ಇಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ' ಎನ್ನುತ್ತಾರಲ್ಲ ಕುವೆಂಪು, ಅದೇ ಕುವೆಂಪು ಕಟ್ಟಲು ಹೊರಟ ವಿಶ್ವಮಾನವ ತತ್ವದ ಭೂಮಿಕೆ. ಈ ಪ್ರಸ್ತುತಿಯುದ್ದಕ್ಕೂ ಇದು ನಮ್ಮ ಅನುಭವಕ್ಕೆ ಬರುತ್ತಿತ್ತು. ಸಾಮಾಜಿಕ ನ್ಯಾಯ ಮತ್ತು ಮನುಷ್ಯ ಘನತೆಯನ್ನು ಕುವೆಂಪು ಎತ್ತಿಹಿಡಿದಂತೆ ಮತ್ತಾರೂ ಎತ್ತಿ ಹಿಡಿದಿಲ್ಲವೇನೋ. ಈ ಪ್ರಸ್ತುತಿಯೂ ಇದನ್ನು ಗಮನದಲ್ಲಿಟ್ಟುಕೊಂಡಿದೆ.

ಅಯೋಧ್ಯೆಯಿಂದ ಅಯೋಧ್ಯೆಯ ತನಕದ ರಾಮನ ಪರಿಭ್ರಮಣವು ಏನೆಲ್ಲವನ್ನು ಹೇಳುತ್ತದೆ! ಈ ಪರಿಭ್ರಮಣದಲ್ಲಿ ರಾಮನ ಬದುಕು ಮಾತ್ರವಲ್ಲ, ಅವನೊಂದಿಗಿನ ಎಲ್ಲರ ಬದುಕೂ ಭೂಮಿ ಆಕಾಶಗಳ ಎರಿಳಿತಗಳನ್ನು ಕಂಡಿದೆ. ಆದರೆ ಎಲ್ಲ ಪಾತ್ರಗಳೂ ಹೆಣಗುವುದು ಮಾತ್ರ, ಮನುಷ್ಯರಾಗಿ ಉಳಿಯಲು. ಇದೊಂದು ಚಿಕಿತ್ಸಕ ಪ್ರಕ್ರಿಯೆ ಎಂದರೂ ನಡೆಯುತ್ತದೆ. ಎಲ್ಲರೂ ಈ ಪ್ರಕ್ರಿಯೆಯಲ್ಲಿ ಬೇಕಾಗಿ ಬೇಡವಾಗಿ ಪಾಲ್ಗೊಳ್ಳುತ್ತಾ ಹೋಗುತ್ತಾರೆ. ರಾಮ ಸ್ವೇಚ್ಛೆಯಿಂದ ಇದರಲ್ಲಿ ತನ್ನನ್ನು ತೊಡಗಿಸಿಕೊಂಡರೆ, ರಾವಣ ಪ್ರತಿರೋಧಿಸುತ್ತಲೇ ಇದಕ್ಕೆ ತನ್ನನ್ನು ಒಡ್ಡಿಕೊಳ್ಳುತ್ತಾನೆ. ಮನದ ಕಾಳಿಕೆಗಳನ್ನು ಕಳೆದುಕೊಳ್ಳುತ್ತಾ ಶುದ್ಧಗೊಳ್ಳುತ್ತಾ ಹೋಗುವ ಈ ದಾರಿ ಪರಮ ಕಷ್ಟದ್ದು. ಮಂಥರೆಗೆ ಕುವೆಂಪು ಪುನರ್ಜನ್ಮ ಕೊಡುವುದೂ ಈ ಹಿನ್ನೆಲೆಯಲ್ಲಿಯೇ. ಭರತ ರಾಜನಾಗಬೇಕು ಎನ್ನುವ ತನ್ನ ಆಸೆ ಭರತನ ಮೇಲಿನ ಮೋಹವೇ ಹೊರತು, ಅದು ರಾಮನನ್ನು ಕುರಿತ ದ್ವೇಷವಲ್ಲ ಎನ್ನುವ ಸೂಕ್ಷ್ಮ ಅರಿವಿನಲ್ಲಿ ಮಂಥರೆಯನ್ನು ಖಳನಾಯಕಿಯ ಇಮೇಜ್‌ನಿಂದ ಥಟ್ ಎಂದು, ಆದರೆ ಅತ್ಯಂತ ಪರಿಣಾಮಕಾರಿಯಾಗಿ ಹೊರತರುತ್ತಾರೆ.

ಭಾಗೀರತಿಬಾಯಿ ಕದಂ ಮಂಥರೆಯ ಪಾತ್ರವನ್ನು ಮೈಹೊಕ್ಕವರಂತೆ ಅಭಿನಯಿಸಿದ್ದಾರೆ. ಸ್ವಾರ್ಥ, ಮೋಹ ಬಿಟ್ಟದ್ದು ಯಾರನ್ನು? ಭರತನಿಗೆ ಪಟ್ಟಾಭಿಷೇಕವಾಗಲಿ ಎನ್ನುವ ತನ್ನ ಬಯಕೆ, ತನ್ನ ಹಕ್ಕಿನದ್ದೂ ಹೌದಲ್ಲವೆ ಎನ್ನುವುದನ್ನು ಮಂಥರೆ ನಿಸ್ಸಂಕೋಚವಾಗಿ, ನಿರ್ಭಿಡೆಯಿಂದ ಎತ್ತಿ ಹಿಡಿಯುತ್ತಾಳೆ. ಏಕೆಂದರೆ ಅದು ರಾಮನ ವಿರುದ್ಧದ ಪಿತೂರಿಯಲ್ಲ ಎನ್ನುವ ಖಚಿತತೆ ಅವಳಿಗಿದೆ. ಲೋಕ ಏನಾದರೂ ಹೇಳಲಿ ಎನ್ನುವ ಅವಳ ಅಂತರಂಗ, ರಂಗದಲ್ಲಿ ಅನಾವರಣಗೊಂಡ ರೀತಿ ಭಾಗೀರತಿಯವರ ಪ್ರತಿಭೆಯನ್ನು ಮತ್ತೊಮ್ಮೆ ಕಾಣಿಸಿತು.

ವಾಲಿ–ಸುಗ್ರೀವರ ಸನ್ನಿವೇಶಕ್ಕೆ ಕೊಟ್ಟ ಸಮಯ ಹೆಚ್ಚಾಯಿತೇನೋ ಎಂದು ಭಾಸವಾದರೂ, ಮನುಷ್ಯ ಸಂಬಂಧಗಳ ಆರ್ದ್ರತೆಯನ್ನು, ಅದು ನಮ್ಮ ಈ ಕಾಲದ ಕೊರತೆಗಳಲ್ಲಿ ಒಂದಾಗಿದೆ ಎನ್ನುವ ಆತಂಕದ ಹಿನ್ನೆಲೆಯಲ್ಲಿ ಅದನ್ನು ಸಮರ್ಥಿಸಿಕೊಳ್ಳುವುದು ಸಾಧ್ಯ ಎಂದೆನ್ನಿಸುತ್ತಿದೆ. ಅದರಲ್ಲೂ ಅಧಿಕಾರದ ದಾಹ ಮತ್ತು ಕ್ರೌರ್ಯಗಳನ್ನು ಗೆಲ್ಲುವ ಶಕ್ತಿಯಿರುವುದು ಮನುಷ್ಯ ಸಂಬಂಧಗಳಿಗೆ ಮಾತ್ರ ಎನ್ನುವ ಸಂದೇಶವನ್ನು ನೀಡುವಲ್ಲಿ ಇದು ಯಶಸ್ವಿಯಾಯಿತು. ರಾವಣನ ಪಾತ್ರಧಾರಿ ತಮ್ಮ ತನ್ಮಯತೆ, ಚೈತನ್ಯಗಳಿಂದ ಈ ನಾಟಕವನ್ನು ಎತ್ತಿಹಿಡಿದರು. ಸೀತೆಯ ವ್ಯಕ್ತಿತ್ವದ ಮಾರ್ದವತೆ ಮತ್ತು ಕಾಠಿಣ್ಯಗಳೆರಡನ್ನೂ ಒಳಗೊಂಡಂತಿದ್ದ ನಟಿಯ ಮೋಹಕತೆ ಮತ್ತು ತುಸು ಗಡುಸಾದ ಧ್ವನಿ ನಿಜಕ್ಕೂ ಸೀತೆಯ ಪಾತ್ರಕ್ಕೆ ಪ್ರಭೆ ತಂದುಕೊಟ್ಟಿತು. ರಾಮ, ಲಕ್ಷ್ಮಣ, ಅನಲ, ಮಂಡೋದರಿ, ಕೈಕೇಯಿ, ಆಂಜನೇಯ, ವಾಲಿ ಸುಗ್ರೀವ ಈ ಎಲ್ಲ ಪಾತ್ರಧಾರಿಗಳೂ ಸೇರಿದಂತೆ ಯಾವ ಸಣ್ಣ ಪಾತ್ರಧಾರಿಯೂ ಐದು ತಾಸುಗಳ ಸುದೀರ್ಘ ನಾಟಕದಲ್ಲಿ ತಮ್ಮ ಸಂಭಾಷಣೆಯನ್ನು ಮರೆಯಲಿಲ್ಲ, ತಡವರಿಸಲಿಲ್ಲ. ನಾಟಕದ ತಾಲೀಮು ಹೇಗಿದ್ದಿರಬಹುದೆನ್ನುವುದನ್ನು ಇದರಿಂದಲೇ ಊಹಿಸಬಹುದು. ಪ್ರಸಾದನ ಕೂಡ ರಂಗಪ್ರಯೋಗದ ಆಶಯಗಳನ್ನು ಸ್ಪಷ್ಟಪಡಿಸುವಂತಿತ್ತು. ಆದರೆ ಸಂಗೀತ ಇದಕ್ಕೆ ಪೂರಕವಾಗಿತ್ತು ಎನ್ನುವುದು ಕಷ್ಟ. ಸಂಗೀತ ಇಡೀ ನಾಟಕವನ್ನು ಇನ್ನಷ್ಟು ಪರಿಣಾಮಕಾರಿಯಾಗಿಸಬಹುದಿತ್ತು.

ಈ ನಮ್ಮ ಕಾಲಕ್ಕೆ ಬರೆದ ರಾಜಕೀಯ ಭಾಷ್ಯ ಈ ರಂಗಪ್ರಸ್ತುತಿ. ಕುವೆಂಪು ಅವರನ್ನು ನಮ್ಮ ಈ ಕಾಲಕ್ಕೆ ಇನ್ನಷ್ಟು ಸಂಗತಗೊಳಿಸಿದ, ನಾಡಿನ ಪ್ರಜ್ಞಾವಂತರ ಧ್ವನಿಯಾದ ಇದನ್ನು ರೂಪಿಸಿದ ಎಲ್ಲರಿಗೂ ಅಭಿನಂದನೆಗಳು.